# ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

## ಸೆಪ್ಟೆಂಬರ್ ೨೫, ೨೦೨೪ರ ಬುಧವಾರದಂದು ನಡೆದ ಕಾರ್ಯಕಾರಿ ಸಮಿತಿ ೨೨೭ನೇ ಸಭೆಯ ನಡವಳಿಗಳು

೦೧. ಡಾ. ಡಿ.ವಿ. ಪರಮಶಿವಮೂರ್ತಿ, ಮಾನ್ಯ ಕುಲಪತಿಗಳು, ಕವಿಹಂ : ಅಧ್ಯಕ್ಷರು

೦೨. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು : ಸದಸ್ಯರು
ಇವರ ಪರವಾಗಿ ಶ್ರೀ ಬಸವರಾಜ ಹೂಗಾರ, ಜಂಟಿ ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕಲಬುರಗಿ

೦೩. ಡಾ. ಸುಮಾ ಬಿ.ಯು., ಬೆಂಗಳೂರು : ಸದಸ್ಯರು

೦೪. ಶ್ರೀ ಸೋಮಶೇಖರ ಬಣ್ಣದ ಮನೆ, ಹೊಸಪೇಟೆ : ಸದಸ್ಯರು

೦೫. ಡಾ. ಎಸ್.ಎಂ. ಮುತ್ತಯ್ಯ, ಶಿವಮೊಗ್ಗ : ಸದಸ್ಯರು

೦೬. ಶ್ರೀ ಎನ್.ಎ. ಮಹಮ್ಮದ್ ಇಸ್ಮಾಯಿಲ್, ಬೆಂಗಳೂರು : ಸದಸ್ಯರು

೦೭. ಡಾ. ಬಂಜಗೆರೆ ಜಯಪ್ರಕಾಶ್, ರಾಮನಗರ : ಸದಸ್ಯರು

೦೮. ಶ್ರೀ ಕೆ. ಫಣಿರಾಜ್, ಉಡುಪಿ : ಸದಸ್ಯರು

೦೯. ಡಾ. ನಟರಾಜ್ ಹುಳಿಯಾರ್, ಬೆಂಗಳೂರು : ಸದಸ್ಯರು

೧೦. ಡಾ. ಎಫ್.ಟಿ. ಹಳ್ಳಿಕೇರಿ, ಡೀನ್, ಭಾಷಾ ನಿಕಾಯ, ಕವಿಹಂ : ಸದಸ್ಯರು

೧೧. ಡಾ. ಚಲುವರಾಜು, ಡೀನ್, ಸಮಾಜ ವಿಜ್ಞಾನಗಳ ನಿಕಾಯ, ಕವಿಹಂ : ಸದಸ್ಯರು

೧೨. ಡಾ. ಶಿವಾನಂದ ಎಸ್. ವಿರಕ್ತಮಠ, ಡೀನ್, ಲಲಿತಕಲೆಗಳ ನಿಕಾಯ, ಕವಿಹಂ : ಸದಸ್ಯರು

೧೩. ಡಾ. ಶೈಲಜ ಇಂ. ಹಿರೇಮಠ, ಡೀನ್, ವಿಜ್ಞಾನಗಳ ನಿಕಾಯ, ಕವಿಹಂ : ಸದಸ್ಯರು

೧೪. ಡಾ. ಎ. ಶ್ರೀಧರ, ಹಣಕಾಸು ಅಧಿಕಾರಿಗಳು, ಕವಿಹಂ : ವಿಶೇಷ ಆಹ್ವಾನಿತರು

೧೫. ಡಾ. ವಿಜಯ್ ಪೂಣಚ್ಚ ತಂಬಂಡ, ಕುಲಸಚಿವರು, ಕವಿಹಂ : ಪದನಿಮಿತ್ತ ಕಾರ್ಯದರ್ಶಿ

**ಸಭೆಯಲ್ಲಿ ಅನುಪಸ್ಥಿತರಿದ್ದವರು:**

೦೧. ಶ್ರೀ ಬಿ.ಆರ್. ಪಾಟೀಲ್, ಕಲಬುರಗಿ : ಸದಸ್ಯರು

೦೨. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು : ಸದಸ್ಯರು

೦೩. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು : ಸದಸ್ಯರು

೦೪. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು : ಸದಸ್ಯರು

೦೫. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು : ಸದಸ್ಯರು

ಸಭೆಯ ಆರಂಭದಲ್ಲಿ ಮಾನ್ಯ ಕುಲಪತಿಗಳು ಹಾಗೂ ಕುಲಸಚಿವರು ಸರ್ಕಾರದಿಂದ ನೂತನವಾಗಿ ನಿಯೋಜನೆಗೊಂಡ ಕಾರ್ಯಕಾರಿ ಸಮಿತಿ ಸದಸ್ಯರನ್ನು ಹಾಗೂ ಉಳಿದ ಎಲ್ಲಾ ಸದಸ್ಯರನ್ನು ಮತ್ತು ಅಧ್ಯಕ್ಷರನ್ನು ಕುಲಸಚಿವರು ಸಭೆಗೆ ಸ್ವಾಗತಿಸಿದರು. ನಂತರ ಮಂಡಿಸಲಾದ ಕಾರ್ಯಸೂಚಿಯ ಕುರಿತು ಚರ್ಚಿಸಿ, ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

**ವಿಷಯ** : ದಿನಾಂಕ ೨೭.೦೮.೨೦೨೪ರಂದು ನಡೆದ ಕಾರ್ಯಕಾರಿ ಸಮಿತಿಯ ೨೨೬ನೇ ಸಭೆಯ ನಡವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು. (ಅನುಬಂಧ-೦೧)

**ನಿರ್ಣಯ** : ದಿನಾಂಕ ೨೭.೦೮.೨೦೨೪ರಂದು ನಡೆದ ಕಾರ್ಯಕಾರಿ ಸಮಿತಿಯ ೨೨೬ನೇ ಸಭೆಯ ನಡವಳಿಗಳನ್ನು ಪರಿಶೀಲಿಸಿ ಸ್ಥಿರೀಕರಣಕ್ಕೆ ಅನುಮೋದನೆ ನೀಡಿತು.

**ವಿಷಯ** : ದಿನಾಂಕ ೨೭.೦೮.೨೦೨೪ರಂದು ನಡೆದ ಕಾರ್ಯಕಾರಿ ಸಮಿತಿಯ ೨೨೬ನೇ ಸಭೆಯ ನಡವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡುವ ಕುರಿತು. (ಅನುಬಂಧ-೦೨)

**ನಿರ್ಣಯ** : ದಿನಾಂಕ ೨೭.೦೮.೨೦೨೪ರಂದು ನಡೆದ ಕಾರ್ಯಕಾರಿ ಸಮಿತಿಯ ೨೨೬ನೇ ಸಭೆಯ ನಡವಳಿಗಳ ಅನುಪಾಲನಾ ವರದಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

**೨೨೭.೦೧** ಭದ್ರತೆ ಮತ್ತು ಸ್ವಚ್ಛತೆ ಟೆಂಡರ್ ಕುರಿತು.

**ಟಿಪ್ಪಣಿ** : ಕನ್ನಡ ವಿಶ್ವವಿದ್ಯಾಲಯದಲ್ಲಿ ಭದ್ರತೆ ಮತ್ತು ಸ್ವಚ್ಛತೆಗಾಗಿ ೨೦೧೯ರಲ್ಲಿ ಇ-ಟೆಂಡರ್ ಮೂಲಕ ಕ್ರಮವಹಿಸಿ ಗುತ್ತಿಗೆ ನೀಡಲಾಗಿತ್ತು. ಇ-ಟೆಂಡರ್ ಅವಧಿ ದಿನಾಂಕ ೩೧.೦೩.೨೦೨೦ಕ್ಕೆ ಮುಕ್ತಾಯವಾಗಿರುತ್ತದೆ. ಕೋವಿಡ್ ಅವಧಿ ಮತ್ತಿತರ

ಕಾರಣಗಳಿಂದ ಅಲ್ಲಿಂದ ದಿನಾಂಕ ೧೯.೦೪.೨೦೨೪ರವರೆಗೆ ಮುಂದುವರೆಸಲಾಗಿದೆ. ಮುಂದುವರೆದು ೧೯.೦೪.೨೦೨೪ ರಿಂದ ಇಲ್ಲಿಯವರೆಗೆ ಭದ್ರತೆ ಮತ್ತು ಸ್ವಚ್ಛತೆ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಕಾರ್ಮಿಕ ಇಲಾಖೆಯ ಕನಿಷ್ಠ ವೇತನದಂತೆ ಇವರಿಗೆ ಪಾವತಿಸಲಾಗುತ್ತಿದೆ. ಸ್ವಚ್ಛತೆಗಾಗಿ ಮಾಸಿಕ ರೂ. ೫,೯೭,೧೧೦/- ಮತ್ತು ಭದ್ರತೆಗೆ ಮಾಸಿಕ ರೂ. ೮,೮೬,೦೨೬/- ಹೀಗೆ ಮಾಸಿಕ ಒಟ್ಟು ರೂ. ೧೪,೮೩,೧೩೬/- ಆಗುತ್ತದೆ.

ವಿಶ್ವವಿದ್ಯಾಲಯವು ಸದ್ಯ ಆರ್ಥಿಕ ಮುಗ್ಗಟ್ಟಲ್ಲಿರುತ್ತದೆ. ಈ ಪಾವತಿಯು ವಿಶ್ವವಿದ್ಯಾಲಯಕ್ಕೆ ಹೊರೆ ಆಗುವುದರಿಂದ ಅಕ್ಟೋಬರ್ ೦೧, ೨೦೨೪ರಿಂದ ಸ್ಥಗಿತಗೊಳಿಸಿ ಲಭ್ಯವಿರುವ ಖಾಯಂ ಅಥವಾ ತಾತ್ಕಾಲಿಕ ಸಿಬ್ಬಂದಿಗಳಿಂದ ಈ ಕೆಲಸ ನಿರ್ವಹಿಸಲು ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯದ ಕುರಿತು ಸಭೆಯು ಸುದೀರ್ಘವಾಗಿ ಚರ್ಚಿಸಿ ಈ ಕೆಳಗಿನಂತೆ ನಿರ್ಣಯಗಳನ್ನು ಕೈಗೊಳ್ಳಲಾಯಿತು.

೧. ಮೆ. ಕೌಶಲ್ಯ ಸೆಕ್ಯುರಿಟಿ ಸರ್ವಿಸ್, ಕಲಬುರಗಿ ಇವರಿಂದ ವಿಶ್ವವಿದ್ಯಾಲಯದ ಕಟ್ಟಡಗಳ ಭದ್ರತೆಗೆ ಹಾಗೂ ವಿಶ್ವವಿದ್ಯಾಲಯದ ಕಟ್ಟಡಗಳ ಶುಚಿತ್ವ ನಿರ್ವಹಣೆಗಾಗಿ ಪಡೆಯುತ್ತಿರುವ ಸೇವೆಯನ್ನು ಸ್ಥಗಿತಗೊಳಿಸಿ, ತಕ್ಷಣವೇ ಟೆಂಡರನ್ನು ದಿನಾಂಕ ೩೦.೯.೨೦೨೪ರಂದು ಅನ್ವಯವಾಗುವಂತೆ ರದ್ದುಗೊಳಿಸುವುದು.

೨. ಸದರಿ ಕೆಲಸಗಳಿಗಾಗಿ ವಿಶ್ವವಿದ್ಯಾಲಯದ ತಾತ್ಕಾಲಿಕ ಸಿಬ್ಬಂದಿಗಳನ್ನು ನಿಯೋಜಿಸುವುದು ಮತ್ತು ಈ ಕೆಲಸಗಳ ನಿರ್ವಹಣೆಗಾಗಿ ನಿಯೋಜಿಸುವ ಸಿಬ್ಬಂದಿಗಳಿಗೆ ತರಬೇತಿಯನ್ನು ಒಂದು ತಿಂಗಳು ಅಂದರೆ ಅಕ್ಟೋಬರ್ ೨೦೨೪ರ ಅವಧಿಯೊಳಗೆ ನೀಡುವುದು. ನಂತರದಲ್ಲಿ ಅವರಿಗೆ ಬೇಕಾದ ಸಮವಸ್ತ್ರ, ಶೂ ಮುಂತಾದವುಗಳನ್ನು ವಿತರಿಸುವುದು.

೩. ಬದಲಿ ವ್ಯವಸ್ಥೆಯಾಗುವವರೆಗೆ ಸದರಿ ಸೇವೆಯನ್ನು ಮಾಡುತ್ತಿರುವ ಸಿಬ್ಬಂದಿಗಳನ್ನು ದಿನಗೂಲಿ ಲೆಕ್ಕದಲ್ಲಿ ಅಕ್ಟೋಬರ್ ೩೧, ೨೦೨೪ರವರೆಗೆ ಮುಂದುವರಿಸುವುದು.

## ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು

೨೨೭.೦೨ ದಿನಾಂಕ ೦೬.೦೮.೨೦೨೪ರಂದು ನಡೆದ ಶೈಕ್ಷಣಿಕ ಸುಧಾರಣಾ ಸಮಿತಿ ಸಭೆಯ ನಡೆವಳಿ ಕುರಿತು.

ಟಿಪ್ಪಣಿ : ದಿನಾಂಕ ೦೬.೦೮.೨೦೨೪ರಂದು ಕನ್ನಡ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಶೈಕ್ಷಣಿಕ ಸುಧಾರಣಾ ಸಮಿತಿ ಸಭೆಯ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ನಡೆವಳಿಗಳನ್ನು ಸಭೆಯು ಪರಿಶೀಲಿಸಿ ಈ ಕೆಳಗಿನಂತೆ ಅಭಿಪ್ರಾಯಗಳನ್ನು ನೀಡಿ ಅನುಮೋದನೆ ನೀಡಿತು.

೧. ಭರತನಾಟ್ಯ ಕೋರ್ಸ್‌ಗೆ ಸಂಬಂಧಿಸಿದಂತೆ ಅಧ್ಯಾಪಕರು ಲಭ್ಯವಿಲ್ಲದಿದ್ದಲ್ಲಿ ಅರ್ಜೆನ್ ಫ್ಯಾಕಲ್ಟಿ ಮೇಲೆ ನುರಿತ ಪ್ರಾಧ್ಯಾಪಕರನ್ನು ನಿಯೋಜಿಸಿಕೊಳ್ಳಲು ಕ್ರಮವಹಿಸಬಹುದು.

೨. ಮಾಹಿತಿ ತಂತ್ರಜ್ಞಾನದ ಹಾಗೂ ಮತ್ತಿತರ ಉದ್ಯೋಗಿಗಳಿಗೆ ಕನ್ನಡ ಕಲಿಕೆಗೆ ಕುರಿತು ಒಡಂಬಡಿಕೆ ಮಾಡಿಕೊಳ್ಳುವ ಸಂಸ್ಥೆಯ ಹಿನ್ನೆಲೆಯನ್ನು ಪರಿಶೀಲಿಸಿ ಕ್ರಮವಹಿಸಲು ಸಭೆ ಅನುಮೋದಿಸಿತು.

೩. ವರ್ಚುವಲ್ ಕನ್ನಡ ಕೇಂದ್ರ ಸ್ಥಾಪನೆಗೆ ಸಂಬಂಧಿಸಿದಂತೆ ಉಪಸಮಿತಿಯನ್ನು ರಚಿಸಿ, ಪ್ರಸ್ತಾವನೆಯನ್ನು ಸಿದ್ಧಪಡಿಸಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲು ಸಭೆ ನಿರ್ಣಯಿಸಿತು.

೪. ಈ ಸಂಬಂಧ ಗಡಿನಾಡು ಅಭಿವೃದ್ಧಿ ಪ್ರಾಧಿಕಾರ ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರಗಳ ಸಹಾಯವನ್ನು ಪಡೆಯಲು ಸಭೆಯು ಸೂಚಿಸಿತು.

೫. ಕನ್ನಡ ಕಲಿಕಾ ಕಾರ್ಯಕ್ರಮಗಳನ್ನು ನಡೆಸಲು ಅನುಮತಿ ನೀಡುವ ಸಂದರ್ಭದಲ್ಲಿ ಪದಾಂತರಂಗ ಸಂಸ್ಥೆಯ ಪೂರ್ವಾಪರವನ್ನು ಪರಿಶೀಲಿಸಿ ಪೂರ್ಣ ವಿವರದೊಂದಿಗೆ ಮುಂದಿನ ಸಭೆಯಲ್ಲಿ ಮಂಡಿಸಲು ಸೂಚಿಸಿತು.

೨೨೭.೦೩ ದಿನಾಂಕ ೨೧.೦೯.೨೦೨೪ರಂದು ನಡೆದ ಕಾಮಗಾರಿ/ಕಟ್ಟಡ ಸಲಹಾ ಸಮಿತಿ ಸಭೆ ನಡೆವಳಿ ಕುರಿತು.

ಟಿಪ್ಪಣಿ : ದಿನಾಂಕ ೨೧.೦೯.೨೦೨೪ರ ಶನಿವಾರದಂದು ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ನಡೆದ ಕಾಮಗಾರಿ/ಕಟ್ಟಡ ಸಲಹಾ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ನಡೆವಳಿಗಳನ್ನು ಪರಿಶೀಲಿಸಿ ಸಭೆಯು ಈ ಕೆಳಗಿನಂತೆ ಕ್ರಮ ಕೈಗೊಳ್ಳಲು ಸೂಚಿಸಿ ಅನುಮೋದನೆ ನೀಡಿತು.

೧. ಕ್ರೆಡಿಲ್ ಸಂಸ್ಥೆಯು ನಿರ್ವಹಿಸುತ್ತಿರುವ ಕಟ್ಟಡ ಕಾಮಗಾರಿಗಳ ವಿಳಂಬದ ಕುರಿತು ಹಾಗೂ ಕಾಮಗಾರಿ ಪೂರ್ಣಗೊಳಿಸುವ ಬಗ್ಗೆ ಕರಾರು ಒಪ್ಪಂದದಂತೆ ಅತಿಥಿಗೃಹ ಕಟ್ಟಡವನ್ನು ಪೂರ್ಣಗೊಳಿಸಲು ನೋಟೀಸ್ ನೀಡಿ ವಿವರಣೆಯನ್ನು ಪಡೆಯುವುದು. ಒಂದು ವೇಳೆ ಸದರಿ ಸಂಸ್ಥೆಯು ಯಾವುದೇ ವಿವರಣೆ ನೀಡದಿದ್ದಲ್ಲಿ ಕಾನೂನು ಪ್ರಕಾರ ಕ್ರಮವಹಿಸುವುದು.

೨. ವಿದ್ಯುತ್ ಕಾಮಗಾರಿಯನ್ನು ವಿಶ್ವವಿದ್ಯಾಲಯದ ತಾಂತ್ರಿಕ ವಿಭಾಗವು ನಿರ್ವಹಿಸುವುದು.

೩. ಪೂರ್ಣಗೊಂಡ ಕಾಮಗಾರಿಗಳ ಪಾವತಿಗೆ ಕ್ರಮವಹಿಸುವುದು.

೨೨೭.೦೪ ಕನ್ನಡ ವಿಶ್ವವಿದ್ಯಾಲಯದ ಡಿಪ್ಲೊಮಾ, ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳನ್ನು ಮತ್ತು ಹೊಸ ವಿಭಾಗಗಳನ್ನು ಮುಂದುವರಿಸುವ ಅನುಶಾಸನಗಳ ಕುರಿತು.

ನಿರ್ಣಯ : ಸದರಿ ವಿಷಯದ ಕುರಿತು ಸಭೆಯು ಚರ್ಚಿಸಿ, ಕುಲಸಚಿವರು ದಿನಾಂಕ ೧೩.೦೯.೨೦೨೪ರಂದು ಉನ್ನತ ಶಿಕ್ಷಣ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಬರೆದಿರುವ ಪತ್ರಕ್ಕೆ ಸರ್ಕಾರದಿಂದ ಬರುವ ಸೂಚನೆಯನ್ನು ನಿರೀಕ್ಷಿಸಿ ಮುಂದಿನ ಕ್ರಮವಹಿಸಲು ಸಭೆ ಸೂಚಿಸಿತು.

೨೨೭.೫ ಕರ್ನಾಟಕ ಇತಿಹಾಸ ಅಕಾಡೆಮಿ ಸಹಯೋಗದೊಂದಿಗೆ ಕಾರ್ಯಕ್ರಮ ಆಯೋಜನೆ ಕುರಿತು.

ನಿರ್ಣಯ : ಕನ್ನಡ ವಿಶ್ವವಿದ್ಯಾಲಯವು ಕರ್ನಾಟಕ ಇತಿಹಾಸ ಅಕಾಡೆಮಿ ಸಹಯೋಗದೊಂದಿಗೆ ಕಾರ್ಯಕ್ರಮವನ್ನು ನಡೆಸಲು ಸಭೆಯು ಅನುಮೋದನೆ ನೀಡಿತು.

೨೨೭.೬ ಕನ್ನಡ ವಿಶ್ವವಿದ್ಯಾಲಯದ ಬೋಧಕೇತರ ಸಿಬ್ಬಂದಿಗಳ ಇಲಾಖಾ ಮುಂಬಡ್ತಿ ಸಮಿತಿ ಸಭೆಯನ್ನು ನಡೆಸುವ ಕುರಿತು.

ನಿರ್ಣಯ : ಕನ್ನಡ ವಿಶ್ವವಿದ್ಯಾಲಯದ ಬೋಧಕೇತರ ಸಿಬ್ಬಂದಿಗಳ ಪದೋನ್ನತಿಗೆ ಸಂಬಂಧಿಸಿದಂತೆ ಇಲಾಖಾ ಮುಂಬಡ್ತಿ ಸಮಿತಿಯ ಸಭೆಯನ್ನು ಕರೆದು ಪ್ರಕ್ರಿಯೆಯನ್ನು ನಿಯಮಾನುಸಾರ ಪೂರ್ಣಗೊಳಿಸಲು ಸಭೆ ಅನುಮೋದನೆ ನೀಡಿತು.

೨೨೭.೭ ಕನ್ನಡ ವಿಶ್ವವಿದ್ಯಾಲಯದ ವೆಬ್‌ಸೈಟ್ ಕುರಿತು.

ನಿರ್ಣಯ : ಕನ್ನಡ ವಿಶ್ವವಿದ್ಯಾಲಯದ ವೆಬ್‌ಸೈಟ್ ಯೂಸರ್ ಫ್ರೆಂಡ್ಲಿ ಆಗದಿರುವ ಬಗ್ಗೆ ಸಭೆಯು ಆಕ್ಷೇಪಿಸಿತು. ವೆಬ್‌ಸೈಟ್ ಅನ್ನು ಉಪಯೋಗಿಸುವವರಿಗೆ ಅನುಕೂಲಕರವಾಗಿರುವ ಹಾಗೆ ಅದನ್ನು ಮರುರೂಪಿಸಬೇಕೆಂದು ಸಭೆ ಸೂಚಿಸಿತು.

ಕುಲಸಚಿವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು
ಪದನಿಮಿತ್ತ ಕಾರ್ಯದರ್ಶಿ

ಕುಲಪತಿಗಳು
ಅಧ್ಯಕ್ಷರು